# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್‌ನ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್-2022 ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)

**ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು – 570006**

**ದೂರವಾಣಿ : 0821–2419318/386/429** **e-mail : dswuommgm@gmail.com**


ಸಂಖ್ಯೆ:ವಿಕ್ಷೇಪಾ.2/15/1435/2019–20 ದಿನಾಂಕ: 30/11/2022

## ಸುತ್ತೋಲೆ

**ವಿಷಯ** : 2022–23ನೇ ಶೈಕ್ಷಣಿಕ ಸಾಲಿನ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳ ಬಗ್ಗೆ.
**ಉಲ್ಲೇಖ:** ಈ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ವಿಕ್ಷೇಪಾ.2/15/1270/2019–20 ದಿ: 07/11/2022

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ 2022–23ನೇ ಶೈಕ್ಷಣಿಕ ಸಾಲಿನ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳನ್ನು 2022ರ ಡಿಸೆಂಬರ್ ಮಾಹೆಯ ಎರಡನೇ ವಾರದಲ್ಲಿ ನಡೆಸಲಾಗುವುದೆಂದು ತಿಳಿಸಲಾಗಿತ್ತು. ಅದರಂತೆ, ಸದರಿ ಸ್ಪರ್ಧೆಗಳನ್ನು 2022ರ ಡಿಸೆಂಬರ್ ಮಾಹೆಯ 08, 09 ಮತ್ತು 10ನೇ ತಾರೀಖುಗಳಂದು 03 ದಿವಸಗಳ ಕಾಲ ಹಮ್ಮಿಕೊಳ್ಳಲಾಗಿದೆ (ವೇಳಾಪಟ್ಟಿಯನ್ನು ಲಗತ್ತಿಸಿದೆ). ಈ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳ ಉದ್ಘಾಟನಾ ಸಮಾರಂಭವನ್ನು ದಿನಾಂಕ: 08–12–2022 ರಂದು ಬೆಳಗ್ಗೆ 9.00 ಗಂಟೆಗೆ ವಿವಿಧ ಕಾಲೇಜುಗಳ ಸಾಂಸ್ಕೃತಿಕ ತಂಡಗಳ ಮೆರವಣಿಗೆಯೊಂದಿಗೆ ಪ್ರಾರಂಭಿಸಲಾಗುತ್ತದೆ. ಮೆರವಣಿಗೆಯಲ್ಲಿ ಭಾಗವಹಿಸುವ ತಂಡಗಳಿಗೆ ಅವರ ಸಮವಸ್ತ್ರಾಲಂಕಾರ, ಶಿಸ್ತು ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ಬಹುಮಾನವನ್ನು ನೀಡಲಾಗುತ್ತದೆ. ಸಮಾರೋಪ ಸಮಾರಂಭವನ್ನು ದಿನಾಂಕ: 10–12–2022ರಂದು ಸಂಜೆ 4.00 ಗಂಟೆಗೆ ಮಾನಸಗಂಗೋತ್ರಿಯ ಸಭಾಂಗಣವೊಂದರಲ್ಲಿ ಏರ್ಪಡಿಸಲಾಗುತ್ತದೆ. ಈಗಾಗಲೇ ಉಲ್ಲೇಖಿತ ಸುತ್ತೋಲೆಯೊಂದಿಗೆ ಕಳುಹಿಸಿದ್ದ ನಮೂನೆ–1ರಲ್ಲಿನ ವಿವರಗಳನ್ನು ಶೀಘ್ರ ಭರ್ತಿ ಮಾಡಿ, ಈ ನಿರ್ದೇಶನಾಲಯಕ್ಕೆ ದಿನಾಂಕ: 05–12–2022 ರೊಳಗಾಗಿ ಕಳುಹಿಸತಕ್ಕದ್ದು. ಉಳಿದ ವಿಷಯಗಳು ಉಲ್ಲೇಖಿತ ಸುತ್ತೋಲೆಯಲ್ಲಿರುವಂತೆ ಯಥಾವತ್ತಾಗಿರುತ್ತದೆ. ಈ ಕುರಿತಾದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ (www.uni-mysore.ac.in) ಪ್ರಕಟಿಸಲಾಗಿದೆ.

**ವಿಶೇಷ ಸೂಚನೆ:** 1. **ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವ ಸ್ಪರ್ಧಾರ್ಥಿಗಳ ವಯೋಮಿತಿ ದಿನಾಂಕ: 01.07.2022ಕ್ಕೆ 27 ವರ್ಷಗಳು ಮೀರಿರಬಾರದು.**

2. **ಶಾಸ್ತ್ರೀಯ ನೃತ್ಯಗಳಲ್ಲಿ ಭಾಗವಹಿಸುವ ಸ್ಪರ್ಧಾರ್ಥಿಗಳು ಸಹ ಕಲಾವಿದರ ನೆರವು ಪಡೆಯಲು ಹಾಗೂ ರೆಕಾರ್ಡಿಂಗ್ ಸಂಗೀತವನ್ನು ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ.**

30/11/22
ನಿರ್ದೇಶಕ
DIRECTOR OF STUDENT WELFARE
UNIVERSITY OF MYSORE, MYSURU
30/11/22 30/11/22

ಗೆ,

ವಿಶ್ವವಿದ್ಯಾನಿಲಯದ ಎಲ್ಲಾ ಅಂಗ/ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು, ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: 0821–2419318/386/429

# ಮೈಸೂರು ವಿಶ್ವವಿದ್ಯಾನಿಲಯ

**ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು – 570006**

**ದೂರವಾಣಿ : 0821–2419318/386/429** **e-mail : dswuommgm@gmail.com**


## 2022–23ನೇ ಸಾಲಿನ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವೇಳಾಪಟ್ಟಿ:

| ದಿನಾಂಕ | ಕಾರ್ಯಕ್ರಮ ನಡೆಯುವ ಸ್ಥಳ | ಸಮಯ | ಸ್ಪರ್ಧೆಗಳ ವಿವರ |
|---|---|---|---|
| 08–12–2022 | ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಮ: 2.00 | ಚಿತ್ರಗೀತೆ |
| | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಮ: 12.30 | ಶಾಸ್ತ್ರೀಯ ಹಾಡುಗಾರಿಕೆ |
| | | ಮ: 12.30 | ಸ್ಥಳದಲ್ಲಿ ಚಿತ್ರ ರಚನೆ |
| | | ಮ: 2.00 | ಜನಪದ ನೃತ್ಯ |
| | | ಮ: 3.00 | ವ್ಯಂಗ್ಯಚಿತ್ರ ರಚನೆ |
| | ಐನ್‌ಸ್ಟೀನ್ ಸಭಾಂಗಣ, ಭೌತಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು | ಮ: 12.30 | ರಸಪ್ರಶ್ನೆ ಸ್ಪರ್ಧೆ |
| | | ಮ: 2.00 | ಪಾಶ್ಚಾತ್ಯ ಸಂಗೀತ |
| | | ಮ: 4.00 | ವೃಂದಗಾನ (ಪಾಶ್ಚಾತ್ಯ) |
| | ಮಾನವಿಕ ಸಭಾಂಗಣ ಮಾನಸಗಂಗೋತ್ರಿ, ಮೈಸೂರು | ಮ: 12.30 | ಜಾನಪದ ಗೀತೆ |
| | | ಮ: 2.30 | ಲಘು ಸಂಗೀತ (ಭಾವಗೀತೆ) |
| 09–12–2022 | ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಸೆನೆಟ್ ಭವನ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಏಕಾಂಕ ನಾಟಕ |
| | | ಬೆ: 11.00 | ಭಿತ್ತಿಪತ್ರ ರಚನೆ |
| | | ಮ: 3.00 | ಮಣ್ಣಿನ ಮಾದರಿ ರಚನೆ |
| | | ಮ: 3.30 | ಪ್ರಹಸನ |
| | ಐನ್‌ಸ್ಟೀನ್ ಸಭಾಂಗಣ ಭೌತಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಏಕಪಾತ್ರಾಭಿನಯ |
| | | ಬೆ: 10.30 | ಕನ್ನಡ ಚರ್ಚಾ ಸ್ಪರ್ಧೆ |
| | | ಮ: 2.00 | ಕನ್ನಡ ಭಾಷಣ ಸ್ಪರ್ಧೆ |
| | ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಅಣುಕು ಸ್ಪರ್ಧೆ |
| | | ಬೆ: 10.00 | ಕಾಗದದ ಚೂರುಗಳಿಂದ ಚಿತ್ರರಚನೆ |
| | | ಬೆ: 11.00 | ವೃಂದಗಾನ (ಭಾರತೀಯ) |
| 10–12–2022 | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ರಂಗೋಲಿ ಸ್ಪರ್ಧೆ |
| | | ಬೆ: 9.00 | ಶಾಸ್ತ್ರೀಯ ನೃತ್ಯ |
| | | ಮ: 12.00 | ಶಾಸ್ತ್ರೀಯ ಸ್ವರವಾದ್ಯ ಸಂಗೀತ |
| | ಐನ್‌ಸ್ಟೀನ್ ಸಭಾಂಗಣ, ಭೌತಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಇಂಗ್ಲಿಷ್ ಚರ್ಚಾ ಸ್ಪರ್ಧೆ |
| | | ಮ: 12.00 | ಇಂಗ್ಲಿಷ್ ಭಾಷಣ ಸ್ಪರ್ಧೆ |
| | ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಬೆ: 10.00 | ಮೂಕಾಭಿನಯ ಸ್ಪರ್ಧೆ |

ವಿಶೇಷ ಸೂಚನೆ:

1. ವಿದ್ಯಾರ್ಥಿಗಳು ಮುಂಚಿತವಾಗಿಯೇ ಸಿದ್ಧರಾಗಿ, ನಿಗದಿತ ವೇಳೆಗೆ ಸ್ಪರ್ಧೆಗಳಲ್ಲಿ ಭಾಗವಹಿಸಿ, ಇತರೆ ಸ್ಪರ್ಧೆಗಳನ್ನು ಆಯಾಯ ಸಮಯಕ್ಕೆ ತಕ್ಕಂತೆ ನಡೆಸಲು ಅನುಕೂಲವಾಗುವಂತೆ ಸಹಕಾರ ನೀಡುವುದು.
2. ಚರ್ಚಾ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆಯ ವಿಷಯವನ್ನು ಸ್ಪರ್ಧೆಗೆ 24 ಗಂಟೆ ಮುಂಚಿತವಾಗಿ ಪ್ರಕಟಿಸಲಾಗುವುದು.
3. ಅನಿವಾರ್ಯ ಕಾರಣಗಳಿಂದ ವೇಳೆ, ಸ್ಥಳ ಬದಲಾವಣೆಯಾದರೆ ಸ್ಥಳದಲ್ಲೇ ಪ್ರಕಟಿಸಲಾಗುವುದು.
4. ಯಾವುದೇ ಸ್ಪರ್ಧೆಗೆ ಮೂರಕ್ಕಿಂತ ಕಡಿಮೆ ಸ್ಪರ್ಧಿಗಳು ಅಥವಾ ತಂಡ ಇದ್ದಲ್ಲಿ, ಅಂತಹ ಸ್ಪರ್ಧೆಯನ್ನು ರದ್ದುಪಡಿಸಲಾಗುವುದು.
5. ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
6. ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಾಲೇಜಿನ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು ಹಾಗೂ ಒಂದು ಜೆರಾಕ್ಸ್ ಪ್ರತಿಯನ್ನು ನೀಡಬೇಕು.

30/11/22

(ಡಾ. ಬಿ.ಎಸ್. ಚಂದ್ರಶೇಖರ್).

ನಿರ್ದೇಶಕ

DIRECTOR OF STUDENT WELFARE
UNIVERSITY OF MYSORE, MYSURU

30/11/22

30/11/22